

ಚೀನಾದ ಬೀದಿ ಬದಿಯ ಕ್ಷೌರಿಕ ಶಿಯಾಂಗ್ ರೇಜರ್‌ನಿಂದಲೇ ಕಣ್ಣು ರೆಪ್ಪೆಯನ್ನು ಶುಚಿಗೊಳಿಸುವ ಕೌಶಲ್ಯ ಹೊಂದಿದ್ದಾನಂತೆ. ವಾರಕ್ಕೆ 8–10 ಗ್ರಾಹಕರ ಬೇಡಿಕೆ ಈಡೇರಿಸುವ ಈತ ಕಣ್ಣು ರೆಪ್ಪೆ ಹೆರೆಯಲು ಕುಳಿತನೆಂದರೆ ನೋಡಲು ನೂರಾರು ಜನ ನೆರೆಯುವರಂತೆ. ಚೀನಾದ ಈ 'ಬ್ಲೇಡ್ ಬ್ಯುಸಿನೆಸ್' ಬೀದಿಯಿಂದ ಕಣ್ಣಿನವರೆಗೂ ಹರಡಿದೆ ಎನ್ನಲಡ್ಡಿಯಿಲ್ಲ.

ಫ್ರಾನ್ಸ್‌ನ ನಗರವೊಂದರಲ್ಲಿ ಕಳೆದ ಆರು ವರ್ಷಗಳಿಂದ ಚಳ್ಳೆ ಹಣ್ಣು ತಿನ್ನಿಸುತ್ತಿದ್ದ 'ಸರಣಿ ಟೈರ್ ತೂತಪ್ಪ'ನನ್ನು ಕೊನೆಗೂ ಪೊಲೀಸರು ಬಂಧಿಸಿದ್ದಾರಂತೆ. ಈ ಆರು ವರ್ಷಗಳಲ್ಲಿ ಸುಮಾರು 6 ಸಾವಿರ ಕಾರುಗಳ ಟೈರ್‌ಗಳನ್ನು ಪಂಕ್ಚರ್ ಮಾಡಿದ್ದ ಆ ವ್ಯಕ್ತಿ ಮುಂದಿನ ವರ್ಷದಲ್ಲಿ ಪಂಕ್ಚರ್ ಮಾಡಬೇಕಾಗಿದ್ದ ಒಂದು ಸಾವಿರ ಕಾರುಗಳ ನಂಬರ್‌ಗಳನ್ನು ನೋಟ್ ಮಾಡಿಕೊಂಡಿದ್ದನಂತೆ. ಸದ್ಯ ಜೈಲಿನಲ್ಲಿರುವ ಆತನನ್ನು ಪೊಲೀಸರು ನಿರುದ್ಯೋಗಿಯನ್ನಾಗಿ ಮಾಡಿದ್ದಾರೆ.

ಚೀನಾದಲ್ಲಿ ಮಿಲಿಟರಿ ಸೇವೆ ಮುಗಿಸಿ ಹೊರಹೋಗುವ ಪ್ರತಿಯೊಬ್ಬ ಸೈನಿಕನೂ ಈ ಮಿಲಿಟರಿ ಅಧಿಕಾರಿ ಮಿಸ್ಟರ್ ಶ್ವಾನಕ್ಕೆ ಸೆಲ್ಯೂಟ್ ಹೊಡೆಯಲೇಬೇಕಂತೆ. ಮನುಷ್ಯನಿಗಿಂತ ಪ್ರಾಣಿಯೇ ಲೇಸು ಅಂದುಕೊಂಡಿರಬಹುದು.





ಉತ್ತರಪ್ರದೇಶದಲ್ಲಿ ಇತ್ತೀಚೆಗೆ 8 ಕತ್ತೆಗಳನ್ನು ನಾಲ್ಕು ದಿನಗಳ ಕಾಲ ಜೈಲಿಗೆ ಅಟ್ಟಲಾಯ್ತಂತೆ. ಅವುಗಳು ಮಾಡಿದ ಅಪರಾಧವೆಂದರೆ ಜೈಲಿನ ಆವರಣದಲ್ಲಿರುವ ದುಬಾರಿ ಗಿಡಗಳನ್ನು ತಿಂದು ಹೊಟಗಿಳಿಸಿದ್ದು. ಕತ್ತೆಗಳ ಮಾಲೀಕನ ಪರವಾಗಿ ಸ್ಥಳೀಯ ರಾಜಕಾರಣಿಯೊಬ್ಬ ಜಾಮೀನು ಹಣ ನೀಡಿದನಂತೆ. ಭಾರತದಲ್ಲಿ ಯಾರೂ– ಪ್ರಾಣಿಗಳೂ ಕೂಡಾ ಕಾನೂನು ಕುಣಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಅಲ್ಲವೇ!



ಉತ್ತರಪ್ರದೇಶದ ರೈಲು ನಿಲ್ದಾಣದಲ್ಲಿ ಸಾವಿಗೇ ಸೆಡ್ಡು ಹೊಡೆದ ವ್ಯಕ್ತಿಯೊಬ್ಬ ಚಲಿಸುತ್ತಿದ್ದ ರೈಲಿನ ಕೆಳಗಿನಿಂದ ಆರಾಮವಾಗಿ ಎದ್ದು ಬಂದನಂತೆ. ಮೇಲ್‌ಸೇತುವೆ ಬದಲು ನಿಂತಿದ್ದ ಗೂಡ್ಸ್ ರೈಲಿನ ಕೆಳಗೆ ಈತ ತೆವಳಿಕೊಂಡು ಹಳಿ ದಾಟುತ್ತಿದ್ದಾಗ ಆ ರೈಲು ಚಲಿಸತೊಡಗಿತಂತೆ. ಅಲ್ಲೇ ಮಲಗಿದ್ದು, ರೈಲು ತೆರಳಿದ ನಂತರ ಕೊಡವಿಕೊಂಡು ಎದ್ದು ನಡೆದನಂತೆ. ಸಾವು ಬಂದಾಗ 'ಇಂದು ಬೇಡ ನಾಳೆ ಬಾ' ಎಂದಂತಿದೆ.

ಇದು ಕಾಲುಚೀಲದ ತಾಜಾ ಘಟನೆಯಾದರೂ ಕಾಲುಚೀಲವೇನೂ ತಾಜಾ ಆಗಿರದೆ ಕೊಳೆತು ನಾರುತ್ತಿತ್ತಂತೆ. ಧರ್ಮಶಾಲಾದಿಂದ ದೆಹಲಿಗೆ ಹೋಗುತ್ತಿದ್ದ ಬಸ್‌ನಲ್ಲಿ ಪ್ರಕಾಶ್‌ಕುಮಾರ್ ಎಂಬಾತ ರಾತ್ರಿ ಶೂ, ಕಾಲುಚೀಲ ತೆಗೆದು ಆರಾಮವಾಗಿ ಪವಡಿಸಿದನಂತೆ. ಆದರೆ ಉಳಿದ ಪ್ರಯಾಣಿಕರ ಆರಾಮವನ್ನು ಆತ ಕಿತ್ತುಕೊಂಡಿದ್ದ. ಕಾಲುಚೀಲದ ದುರ್ವಾಸನೆ ತಾಳಲಾರದೆ ಕಾಲುಚೀಲಗಳನ್ನು ಹೊರಗೆಸೆ ಎಂದು ಸಹಪ್ರಯಾಣಿಕರು ಮನವಿ ಮಾಡಿದರೂ ಆತ ಒಪ್ಪದಿದ್ದಾಗ ಬಸ್ ಅನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋದರಂತೆ. ಕೆಲಕಾಲ ಪೊಲೀಸರಿಗೂ ದುರ್ವಾಸನೆ ಪರಿಚಯಿಸಿದ ಆತ ಸದ್ಯ ಪೊಲೀಸರ ಮೇಲೇ ದೂರು ನೀಡಿದ್ದಾನಂತೆ. ಕಾಲುಚೀಲಗಳನ್ನು ಕೋರ್ಟಿಗೂ ಒಯ್ಯುವ ಇರಾದೆ ಇರಬಹುದು.